# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

ದಿನಾಂಕ: 15.10.2019 ರಂದು ಬೆಳಗ್ಗೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2019–20ನೇ ಸಾಲಿನ ದ್ವಿತೀಯ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು

## ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಶ್ರೀ ಪುರುಷೋತ್ತಮ ರಾವ್ ಸಿಂಧ್ಯ | ಸದಸ್ಯರು |
| 4. | ಶ್ರೀ ನರಸಿಂಹಮೂರ್ತಿ ಸಿ.ಎನ್. | ಸದಸ್ಯರು |
| 5. | ಶ್ರೀ ನಾರಾಯಣ ಎಂ. | ಸದಸ್ಯರು |
| 6. | ಡಾ. ಗುರುಬಸಪ್ಪ ಹೆಚ್.ಡಿ.<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಡಾ. ಹೆಚ್. ಎಂ. ಗಂಗಾಧರಯ್ಯ ರಸ್ತೆ, ಸರಸ್ವತಿ ಪುರಂ, ಮರಳೂರು ಪೋಸ್ಟ್, ತುಮಕೂರು–572105. | ಸದಸ್ಯರು |
| 7. | ಶಿವಾನಂದಯ್ಯ ಎನ್.ಪಿ.,<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು. | ಸದಸ್ಯರು |
| 8. | ಡಾ. ನರಸಿಂಹನ್ ಎಮ್.ಎಸ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್. | ಸದಸ್ಯರು |
| 9. | ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. | ಸದಸ್ಯರು |
| 10. | ನಾರಾಯಣ ಕೆ.ಆರ್.,<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ. | ಸದಸ್ಯರು |
| 11. | ಡಾ. ಆನಂದ ಕುಮಾರಿ,<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 12. | ಡಾ. ಬಾಲಪ್ಪ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ. | ಸದಸ್ಯರು |
| 13. | ಡಾ. ಪಿ. ರಾಜಾರೆಡ್ಡಿ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು. | ಸದಸ್ಯರು |
| 14. | ಡಾ. ಎಸ್.ಬಿ. ಬಸವರೆಡ್ಡಿ,<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು. | ಸದಸ್ಯರು |
| 15. | ಪ್ರೊ. ಪರಶುರಾಮ್ ಕೆ.ಜಿ., ಪ್ರಾಧ್ಯಾಪಕರು | ಸದಸ್ಯರು |

| | | |
|---|---|---|
| 16. | ಡಾ. ಶಿವಲಿಂಗಸ್ವಾಮಿ ಎಚ್.ಕೆ., ಪ್ರಾಧ್ಯಾಪಕರು | ಸದಸ್ಯರು |
| 17. | ಡಾ. ಕೇಶವ, ಪ್ರಾಧ್ಯಾಪಕರು | ಸದಸ್ಯರು |
| 18. | ಡಾ. ರವೀಂದ್ರ ಕುಮಾರ್ ಬಿ., ಪ್ರಾಧ್ಯಾಪಕರು | ಸದಸ್ಯರು |
| 19. | ಡೀನರು, ಕಲಾ ನಿಕಾಯ | ಸದಸ್ಯರು |
| 20. | ಡೀನರು, ಕಾನೂನು ನಿಕಾಯ | ಸದಸ್ಯರು |
| 21. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 22. | ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ | ಸದಸ್ಯರು |
| 23. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 24. | ಡಾ. ಕೊಟ್ರೇಶ್ ಎಂ.<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 25. | ಡಾ. ಕೇಶವ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 26. | ಡಾ. ಬಿ.ಟಿ. ಸಂಪತ್ ಕುಮಾರ್., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 27. | ಹಣಕಾಸು ಅಧಿಕಾರಿಗಳು (ಪ್ರ) | ಸದಸ್ಯರು |
| 28. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 29. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 30. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

## ಹಾಜರಾಗದ ಸದಸ್ಯರು

| | | |
|---|---|---|
| 1. | ಶ್ರೀ ಕಾಂತರಾಜ್ (ಬಿಎಂಎಲ್), ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 2. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 3. | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |
| 4. | ಹೆಚ್.ಎನ್. ವಿಜಯೇಂದ್ರ,<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಮಹಾ ವಿದ್ಯಾಲಯ, ತುಮಕೂರು–05 | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:15.10.2019ರ ಮಂಗಳವಾರ ಬೆಳಗ್ಗೆ 11:00 ಕ್ಕೆ ನಡೆದ 2019-20ನೇ ಸಾಲಿನ ದ್ವಿತೀಯ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ಈ ಕೆಳಕಂಡ ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಭೆಯ ಗಮನಕ್ಕೆ ತಂದರು.

1. ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರುಗಳಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ **Learning Management System (LMS)** ಅಳವಡಿಸಿ, ಡಿಜಿಟಲ್ / ಆನ್‌ಲೈನ್ ಮಾದರಿಯಲ್ಲಿ ಬೋಧನೆಗಳನ್ನು ಚಿತ್ರೀಕರಿಸುತ್ತಿರುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಅವಗಾಹನೆಗೆ ತರುತ್ತಾ, **Learning Management System (LMS)** ವ್ಯವಸ್ಥೆಯನ್ನು ಉದ್ಘಾಟಿಸಿದರು.
2. ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸಂಯೋಜಕರು ಮತ್ತು ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ವಿವಿಧ ಶೈಕ್ಷಣಿಕ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಂದು ಸುದ್ದಿಯಾಗಿ ಪ್ರಚಾರ ಮಾಡಲು "ಕಲ್ಪತರು ಟೈಮ್ಸ್" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಾಯೋಗಿಕ ಪತ್ರಿಕೆಯನ್ನು ಪ್ರಾರಂಭಿಸಿರುವ ಬಗ್ಗೆ ಸಭೆಯ ಗಮನಕ್ಕೆ ಮಾನ್ಯ ಕುಲಪತಿಗಳು ತಂದರು.
3. ವಿಶ್ವವಿದ್ಯಾನಿಲಯದ ಆಡಳಿತ ವಿಭಾಗ, ವಿವಿಧ ಸ್ನಾತಕೋತ್ತರ ವಿಭಾಗ, ಘಟಕ ಕಾಲೇಜುಗಳು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಮಾಡಿರುವ ವಿಶಿಷ್ಟ ಸಾಧನೆಯ ಬಗ್ಗೆ ಹಾಗೂ ನಡೆದಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಇನ್ನು ಮುಂದೆ ನಡೆಯುವ ಸಭೆಗಳಲ್ಲಿ ಅವಗಾಹನೆಗೆ ತರಲಾಗುವುದು ಎಂದು ತಿಳಿಸಿದರು.
4. ತುಮಕೂರು ವಿಶ್ವವಿದ್ಯಾನಿಲಯದ ನೂತನ ಬಿದರಕಟ್ಟೆ ಕ್ಯಾಂಪಸ್‌ಗೆ ಸಂಬಂಧಿಸಿದಂತೆ ನೂತನ ಕ್ಯಾಂಪಸ್‌ನ ನೀಲಿನಕ್ಷೆಯನ್ನು ಮತ್ತು ಇಲ್ಲಿಯವರೆಗೂ ನಡೆದಿರುವ ಪ್ರಗತಿಯ ಬಗ್ಗೆ ಸಭೆಯ ಗಮನಕ್ಕೆ ತಂದರು. ಈ ಎಲ್ಲಾ ವಿಷಯಗಳ ಬಗ್ಗೆ ಕೂಲಕಂಷವಾಗಿ ಚರ್ಚಿಸಿದ ಸಭೆಯು ಮಾನ್ಯ ಕುಲಪತಿಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಶ್ಲಾಘಿಸಿದರು.

ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 16.05.2019 ರಂದು ನಡೆದ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ಬಗ್ಗೆ ಕೈಗೊಂಡಿರುವ ಕಾರ್ಯನಿರ್ವಹಣಾ ವರದಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸಭೆಯು ನಡಾವಳಿಯನ್ನು ಯಥಾವತ್ತಾಗಿ ದೃಢೀಕರಿಸಿತು. | | | |
| ಕಾಲೇಜು ಅಭಿವೃದ್ಧಿ ಪರಿಷತ್ | | | |
| 1 | 2019-20.ಸಾ.ವಿ.ವಿ.ಪ.02<br>ಕಾ.ಅ.ಪ -01 | 2019-20ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣಕ್ಕೆ ಸಂಬಂಧಿಸಿದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಕುರಿತು. | ಕೆಂಪೇಗೌಡ ಫೌಂಡೇಷನ್ ಫಾರ್ ಎಜುಕೇಷನಲ್, ಕಲ್ಚರಲ್ ಅಂಡ್ ಚಾರಿಟೇಬಲ್ ಟ್ರಸ್ಟ್, ತುಮಕೂರು ಇವರ ಶ್ರೀಮತಿ ಕೆಂಚಮ್ಮ ತಿಮ್ಮದಾಸಪ್ಪ ಪ್ರಥಮ ದರ್ಜೆ ಕಾಲೇಜಿಗೆ 2019-20ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಬಿ.ಕಾಂ. ಕೋರ್ಸಿಗೆ 30 ಪ್ರವೇಶ ಮಿತಿಯೊಂದಿಗೆ ಸಂಯೋಜನೆ ನವೀಕರಣಕ್ಕೆ ಈಗಾಗಲೇ ಕೈಗೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸ್ಥಿರೀಕರಿಸಿತು ಹಾಗೂ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |

| ಶೈಕ್ಷಣಿಕ ವಿಭಾಗ | | | |
|---|---|---|---|
| 2 | 2019-20.ಸಾ.ವಿ.ವಿ.ಪ.02 ಶೈ.ವಿ-01 | 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ., ಎಂ.ಬಿ.ಎ-ಬಿಸಿನೆಸ್ ಅನಾಲಿಟಿಕ್ಸ್, ಎಂ.ಬಿ.ಎ-ತರಬೇತಿ & ಅಭಿವೃದ್ಧಿ & ಎಂ.ಸಿ.ಎ ಕೋರ್ಸ್‌ಗಳ ಪ್ರವೇಶಾತಿಗೆ ಸೀಟ್‌ಮ್ಯಾಟ್ರಿಕ್ಸ್ ಮತ್ತು ಶುಲ್ಕ ನಿಗದಿಪಡಿಸುವ ಕುರಿತು. | ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು 2020ರ ಫೆಬ್ರವರಿ ಮಾಹೆಯಲ್ಲಿ "Know your campus" ಎಂಬ ಕಾರ್ಯಕ್ರಮವನ್ನು ಎಲ್ಲಾ ಕಾಲೇಜಿನ ಅಂತಿಮ ವರ್ಷದ ಸ್ನಾತಕ ವಿದ್ಯಾರ್ಥಿಗಳಿಗೆ ಆಯೋಜಿಸಲಾಗುವುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಲ್ಲಾ ರೀತಿಯ ಸೌಲಭ್ಯದ ಬಗ್ಗೆ ಹಾಗೂ ಪ್ರಸ್ತುತವಿರುವ ಮತ್ತು ಹೊಸ ಸ್ನಾತಕೋತ್ತರ ಕೋರ್ಸ್‌ಗಳ ಮಾಹಿತಿಯನ್ನು ವಿದ್ಯಾರ್ಥಿಗಳಿಗೂ ಮತ್ತು ಪೋಷಕರಿಗೂ ತಿಳಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು. ಈ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ., ಎಂ.ಬಿ.ಎ-ಬಿಸಿನೆಸ್ ಅನಾಲಿಟಿಕ್ಸ್, ಎಂ.ಬಿ.ಎ-ತರಬೇತಿ & ಅಭಿವೃದ್ಧಿ & ಎಂ.ಸಿ.ಎ ಕೋರ್ಸ್‌ಗಳ ಪ್ರವೇಶಾತಿಗೆ ಸೀಟ್‌ಮ್ಯಾಟ್ರಿಕ್ಸ್ ಮತ್ತು ಶುಲ್ಕ ನಿಗದಿಪಡಿಸಿ ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 3 | 2019-20.ಸಾ.ವಿ.ವಿ.ಪ.02 ಶೈ.ವಿ-02 | ಸ್ನಾತಕೋತ್ತರ ಇಂಗ್ಲೀಷ್ ವಿಷಯದ ಪಠ್ಯಕ್ರಮದಲ್ಲಿನ ಬದಲಾವಣೆ ಕುರಿತು. | ಸ್ನಾತಕೋತ್ತರ ಇಂಗ್ಲೀಷ್ ವಿಷಯದ ಅಧ್ಯಯನ ಮಂಡಳಿಯ ಶಿಫಾರಸ್ಸಿನ ಮೇರೆಗೆ ಸ್ನಾತಕೋತ್ತರ ಇಂಗ್ಲೀಷ್ ವಿಷಯದ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿ, 2019-20 ಶೈಕ್ಷಣಿಕ ಸಾಲಿನ ಮೊದಲನೇ ವರ್ಷದ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಪರಿಷ್ಕೃತ ಪಠ್ಯಕ್ರಮವನ್ನು ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 4 | 2019-20.ಸಾ.ವಿ.ವಿ.ಪ.02 ಶೈ.ವಿ-03 | 2019-20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾದ ಹೊಸ ಸ್ನಾತಕೋತ್ತರ ಕೋರ್ಸ್‌ಗಳ ಪಠ್ಯಕ್ರಮದ ಪ್ರಕಟಣೆ ಕುರಿತು | 2019-20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾದ ಈ ಕೆಳಕಂಡ ಹೊಸ ಸ್ನಾತಕೋತ್ತರ ಕೋರ್ಸ್‌ಗಳ ಪಠ್ಯಕ್ರಮವನ್ನು ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು.<br>1. M.Sc. in Research Methodology and Statistics |

| | | | |
|---|---|---|---|
| | | | 2. M.A. in Functional English<br>3. Master of Visual Arts<br>4. M.A. in International Relations<br>5. M.Sc. in Food and Nutrition<br>6. M.Sc. in Microbiology<br>7. Masters of Tourism and Travel Management<br>8. M.Com. (Information Systems) |
| 5 | 2019-20.ಸಾ.ವಿ.ವಿ.ಪ.02 ಶೈ.ವಿ-04 | ಸ್ನಾತಕೋತ್ತರ MBA in Business Analytics ಹಾಗೂ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಷಯಗಳ ಪರಿಷ್ಕೃತ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ಸ್ನಾತಕೋತ್ತರ MBA in Business Analytics ಹಾಗೂ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಷಯಗಳ ಪರಿಷ್ಕೃತ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 6 | 2019-20.ಸಾ.ವಿ.ವಿ.ಪ.02 ಶೈ.ವಿ-05 | 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಕುರಿತು | ಸರ್ಕಾರದ ಆಶಯದನ್ವಯ GER ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಮೆರಿಟ್ ಕಮ್ ರೋಸ್ಟರ್ ಅನ್ವಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ಬಡತನದ ಹಿನ್ನಲೆಯನ್ನು ಮನಗಂಡು 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಕೌನ್ಸಿಲಿಂಗ್ ಸಮಯದಲ್ಲಿ ಕೈಗೊಂಡಿರುವ ಎಲ್ಲಾ ಕ್ರಮಗಳಿಗೆ ಸಭೆಯು ಸಹಮತ ನೀಡಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 7 | 2019-20.ಸಾ.ವಿ.ವಿ.ಪ.02 ಶೈ.ವಿ-06 | ಬಿ.ಸಿ.ಎ. ಪದವಿಯ ಪ್ರವೇಶಾತಿಗೆ ರಚಿಸಿರುವ ಅರ್ಹತಾ ಮಾನದಂಡವನ್ನು ಅನುಷ್ಠಾನಗೊಳಿಸುವ ಕುರಿತು. | ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಹಾಗೂ ಸ್ನಾತಕ ಗಣಕ ವಿಜ್ಞಾನ ಅಧ್ಯಯನ ಮಂಡಳಿಯವರು ರಚಿಸಿರುವ ಬಿ.ಸಿ.ಎ. ಪದವಿಯ ಪ್ರವೇಶಾತಿಗೆ ಅರ್ಹತಾ ಮಾನದಂಡವನ್ನು ಅನುಮೋದಿಸಿತು ಹಾಗೂ ಸದರಿ ಮಾನದಂಡವನ್ನು ಚಾಲ್ತಿಯಲ್ಲಿರುವ ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಸೇರ್ಪಡಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲು ಒಪ್ಪಬಹುದು ಎಂದು ಸಭೆಯು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 8 | 2019-20.ಸಾ.ವಿ.ವಿ.ಪ.02 ಶೈ.ವಿ-07 | 2019-20ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಲ್ಲಿ B.Sc-PMCs & CBZ ವಿಭಾಗಗಳ ಪ್ರವೇಶಮಿತಿಯನ್ನು ಹೆಚ್ಚಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು. | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ B.Sc-PMCs & CBZ ಕೋರ್ಸ್‌ಗಳಿಗೆ ಬೇಡಿಕೆಗಳಿದ್ದುದರಿಂದ ಹಾಗೂ ಕೆಲವು ಸ್ನಾತಕೋತ್ತರ ವಿಭಾಗಗಳನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಿಂದ ಮೆಳಕೋಟೆಯಲ್ಲಿರುವ ಕ.ರಾ.ಮು.ವಿ. ಕಟ್ಟಡಕ್ಕೆ ಸ್ಥಳಾಂತರಿಸಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಪ್ರವೇಶಕ್ಕೆ ಸ್ಥಳಾವಕಾಶ ವಿರುವುದನ್ನು ಮಾನ್ಯ ಕುಲಪತಿಗಳು |

| | | | |
|---|---|---|---|
| | | | ಸಭೆಯ ಗಮನಕ್ಕೆ ತಂದರು. ಆದ್ದರಿಂದ ಪ್ರಾಂಶುಪಾಲರ ಮನವಿಯ ಮೇರೆಗೆ 2019-20ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಮಿತಿಯನ್ನು 96 ರಿಂದ 120ಕ್ಕೆ ಹೆಚ್ಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 9 | 2019-20.ಸಾ.ವಿ.ವಿ.ಪ.02 ಶೈ.ವಿ-08 | ಬಿ.ಸಿ.ಎ. ಪದವಿಯ Payment Seat ಗಳ ಸಂಖ್ಯೆಯನ್ನು ಹೆಚ್ಚಿಸಿ, ನಿಗದಿಪಡಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಬಿ.ಸಿ.ಎ. ಪದವಿಗೆ ಪ್ರಾಂಶುಪಾಲರ ಮನವಿಯ ಮೇರೆಗೆ Payment Seat ಗಳ ಸಂಖ್ಯೆಯನ್ನು 20 ರಿಂದ 40ಕ್ಕೆ ಹೆಚ್ಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 10 | 2019-20.ಸಾ.ವಿ.ವಿ.ಪ.02 ಶೈ.ವಿ-09 | ಬಿ.ಕಾಂ. ಹಾಗೂ ಬಿ.ಬಿ.ಎಂ. ಪದವಿಗಳ 3 & 4ನೇ ಸೆಮಿಸ್ಟರ್‌ಗಳ English & Business Communication ಪತ್ರಿಕೆಗಳ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು. | ಬಿ.ಕಾಂ. ಹಾಗೂ ಬಿ.ಬಿ.ಎಂ. ಪದವಿಗಳ 3 & 4ನೇ ಸೆಮಿಸ್ಟರ್‌ಗಳ English & Business Communication ಪತ್ರಿಕೆಗಳಿಗೆ ಸಂಬಂಧಿಸಿದಂತೆ, ಈಗಾಗಲೇ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಯಾಗಿರುವ ಪರಿಷ್ಕೃತ ವಿನಿಯಮದನ್ವಯ ಅಧ್ಯಯನ ಮಂಡಳಿಯವರು ಸಿದ್ಧಪಡಿಸಿರುವ ಪಠ್ಯಕ್ರಮಗಳನ್ನು ಅನುಮೋದಿಸಿತು. ಹಾಗೂ ಪರಿಷ್ಕೃತ ವಿನಿಯಮ ಮತ್ತು ಪರಿಷ್ಕೃತ ಪಠ್ಯಕ್ರಮವನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಅನುಷ್ಠಾನಗೊಳಿಸಬಹುದೆಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 11 | 2019-20.ಸಾ.ವಿ.ವಿ.ಪ.02 ಶೈ.ವಿ-10 | ರೇಣುಕಾಶ್ರೀ ಬಿ.ಜೆ. (15ED8524) ಎಂಬ ವಿದ್ಯಾರ್ಥಿಯ ದ್ವಿತೀಯ ಸೆಮಿಸ್ಟರ್‌ನ ಆಂತರಿಕ ಅಂಕಗಳ ಪರಿಶೀಲನೆ ಕುರಿತು. | ರೇಣುಕಾಶ್ರೀ ಬಿ.ಜೆ. (15ED8524) ಎಂಬ ವಿದ್ಯಾರ್ಥಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ದ್ವಿತೀಯ ಸೆಮಿಸ್ಟರ್‌ನ ಆಂತರಿಕ ಅಂಕಗಳ ಪರಿಶೀಲನೆ ಕುರಿತು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಮುಂಬರುವ ಮ್ಯಾಕ್ ಸಮಿತಿಯ ಮುಂದೆ ಆಂತರಿಕ ಅಂಕಗಳ ದಾಖಲೆಗಳನ್ನು ಮಂಡಿಸಲು ಸಭೆಯು ಅನುಮತಿಸಿತು. ಮತ್ತು ಇನ್ನುಮುಂದೆ ಇದನ್ನೇ ಪೂರ್ವ ನಿದರ್ಶನವನ್ನಾಗಿ ಪರಿಗಣಿಸದಂತೆ ಸಭೆಯು ತೀರ್ಮಾನಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 12 | 2019-20.ಸಾ.ವಿ.ವಿ.ಪ.02 ಶೈ.ವಿ-11 | ಲೈಂಗಿಕ ಶೋಷಿತರಿಗೆ/ ಅವರ ಮಕ್ಕಳಿಗಾಗಿ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಶೈಕ್ಷಣಿಕ ಮೀಸಲಾತಿಯನ್ನು ನೀಡುವ ಬಗ್ಗೆ. | ಲೈಂಗಿಕ ಶೋಷಿತರಿಗೆ/ ಅವರ ಮಕ್ಕಳಿಗಾಗಿ ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು |

| | | | |
|---|---|---|---|
| | | | ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಶೇಕಡ 1% ರಷ್ಟು ಮೀಸಲಾತಿಯನ್ನು ನೀಡಲು ಕೈಗೊಂಡಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| | | ಸಂಶೋಧನಾ ವಿಭಾಗ | |
| 13 | 2019-20.ಸಾ.ವಿ.ವಿ.ಪ.02 ಪಿಹೆಚ್.ಡಿ ವಿಭಾಗ -01 | ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಕೋರ್ಸ್ ವರ್ಕ್‌ನ ಅಂಕಪಟ್ಟಿ ಮುದ್ರಿಸಲು ಪಿಹೆಚ್.ಡಿ. ವಿನಿಯಮ 2012 ಪ್ರಕರಣ 18.1 ರಲ್ಲಿ ನಮೂದಿಸಿರುವ Minimum Pass Marks and Improvement Examination ಅನ್ನು ಅಳವಡಿಸಿಕೊಳ್ಳುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪಿಹೆಚ್.ಡಿ. ವಿನಿಯಮದನ್ವಯ ನೋಂದಣಿಯಾಗಿರುವ ಸಂಶೋಧನಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಪಿಹೆಚ್.ಡಿ. 2012ರ ವಿನಿಯಮದ ಅನುಸಾರ ಕೋರ್ಸ್‌ವರ್ಕ್ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಿ, ಅಂಕಪಟ್ಟಿಗಳನ್ನು ಮುದ್ರಿಸಿ, ವಿತರಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಎಲ್ಲಾ ಡೀನರುಗಳ ಶಿಫಾರಸ್ಸಿನಂತೆ ಪ್ರಸ್ತುತವಿರುವ ಪಿಹೆಚ್.ಡಿ ವಿನಿಯಮದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿ, ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪಡೆಯಲು ಸರ್ಕಾರಕ್ಕೆ ಕಳುಹಿಸಲು ಒಪ್ಪಬಹುದು ಎಂದು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 14 | 2019-20.ಸಾ.ವಿ.ವಿ.ಪ.02 ಪಿಹೆಚ್.ಡಿ ವಿಭಾಗ -02 | ವಿವಿಧ ಸಭೆಗಳಿಗೆ ಆಗಮಿಸುವ ಅಧ್ಯಕ್ಷರು/ ಸದಸ್ಯರುಗಳಿಗೆ ಪ್ರಯಾಣಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ನೀಡುವ ಕುರಿತು. | ವಿವಿಧ ಸಭೆಗಳಿಗೆ ಆಗಮಿಸುವ ಅಧ್ಯಕ್ಷರು/ ಸದಸ್ಯರುಗಳಿಗೆ ಪ್ರಯಾಣಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ನೀಡುವ ಕುರಿತು ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಹಾಗೂ ಹಣಕಾಸು ಅಧಿಕಾರಿಗಳು ಮಾಡಿರುವ ಶಿಫಾರಸ್ಸನ್ನು ದಿನಾಂಕ 01.11.2019 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲು ಒಪ್ಪಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 15 | 2019-20.ಸಾ.ವಿ.ವಿ.ಪ.02 ಪಿಹೆಚ್.ಡಿ ವಿಭಾಗ -03 | ಪಿಹೆಚ್.ಡಿ. ಸಂಶೋಧನಾರ್ಥಿಗಳ ಸಂಶೋಧನಾ ಕಾರ್ಯವನ್ನು ಮುಂದುವರೆಸುವ ಕುರಿತು. | ಸದರಿ ವಿಷಯದ ಬಗ್ಗೆ 2012-13, 2013-14 ಮತ್ತು 2015-16ನೇ ಸಾಲಿನ ಸಂಶೋಧನಾರ್ಥಿಗಳು ಅರ್ಧವಾರ್ಷಿಕ ಪ್ರಗತಿ ವರದಿಗಳು, ಅಂತಿಮ ಸಾರಲೇಖ, ಶೀರ್ಷಿಕೆ ಬದಲಾವಣೆ, ಮಾರ್ಗದರ್ಶಕರ ಬದಲಾವಣೆ ಮತ್ತು ಅವಧಿ ವಿಸ್ತರಣೆ ಮನವಿಗಳನ್ನು ಸರಿಯಾದ ಸಮಯದಲ್ಲಿ ಸಲ್ಲಿಸದೇ ಇರುವುದನ್ನು ಹಾಗೂ ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳನ್ನು ಮಾನ್ಯ ಕುಲಪತಿಗಳು ಅವಗಾಹನೆಗೆ ತಂದರು. ಸದರಿ ವಿಷಯಗಳ ಬಗ್ಗೆ ಕೂಲಂಕಷವಾಗಿ |

| | | | |
|---|---|---|---|
| | | | ಚರ್ಚಿಸಿದ ಸಭೆಯು ಮಾನ್ಯ ಕುಲಪತಿಗಳು ಕೈಗೊಂಡಿರುವ ಕ್ರಮಗಳನ್ನು ಸ್ಥಿರೀಕರಿಸಿ 2012-13ನೇ ವಿದ್ಯಾರ್ಥಿಗಳಿಗೆ ರೂ. ಒಂದು ಲಕ್ಷದಷ್ಟು ದಂಡಶುಲ್ಕದೊಂದಿಗೆ ಮಹಾ ಪ್ರಬಂಧವನ್ನು ಸಲ್ಲಿಸಲು ಆರು ತಿಂಗಳಿಗೆ ಅವಧಿಯನ್ನು ವಿಸ್ತರಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | |
| 16 | 2019-20.ಸಾ.ವಿ.ವಿ.ಪ.02<br>ಸಾ & ಅ. ವಿಭಾಗ -01 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಅನುದಾನದೊಂದಿಗೆ "ಜುಂಜಪ್ಪ ಅಧ್ಯಯನ ಪೀಠ"ವನ್ನು ಸ್ಥಾಪಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಜುಂಜಪ್ಪ ಅಧ್ಯಯನ ಪೀಠ"ವನ್ನು ಸ್ಥಾಪಿಸುವ ಸಂಬಂಧ ಸರ್ಕಾರದ ಮಾರ್ಗಸೂಚಿಯಂತೆ, "ಜುಂಜಪ್ಪ ಅಧ್ಯಯನ ಪೀಠ" ಸ್ಥಾಪನೆಗಾಗಿ ಪರಿಷ್ಕರಿಸಿರುವ ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 17 | 2019-20.ಸಾ.ವಿ.ವಿ.ಪ.02<br>ಸಾ & ಅ. ವಿಭಾಗ -02 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ದೇವರಾಜ ಅರಸು ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ದೇವರಾಜ ಅರಸು ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 18 | 2019-20.ಸಾ.ವಿ.ವಿ.ಪ.02<br>ಸಾ & ಅ. ವಿಭಾಗ -03 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ಕುವೆಂಪು ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಕುವೆಂಪು ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 19 | 2019-20.ಸಾ.ವಿ.ವಿ.ಪ.02<br>ಸಾ & ಅ. ವಿಭಾಗ -04 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಬಸವೇಶ್ವರ ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಶ್ರೀ ಬಸವೇಶ್ವರ ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು |

| | | | |
|---|---|---|---|
| | | | ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 20 | 2019–20.ಸಾ.ವಿ.ವಿ.ಪ.02 ಸಾ & ಅ. ವಿಭಾಗ –05 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ಡಾ. ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಡಾ.ಜಿ.ಎಸ್.ಪರಮಶಿವಯ್ಯ ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 21 | 2019–20.ಸಾ.ವಿ.ವಿ.ಪ.02 ಸಾ & ಅ. ವಿಭಾಗ –06 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ನಾಡಪ್ರಭು ಕೆಂಪೇಗೌಡ ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ನಾಡ ಪ್ರಭು ಕೆಂಪೇಗೌಡ ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 22 | 2019–20.ಸಾ.ವಿ.ವಿ.ಪ.02 ಸಾ & ಅ. ವಿಭಾಗ –07 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ಪ್ರೊ. ಎಂ. ಡಿ. ನಂಜುಂಡಸ್ವಾಮಿ ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಪ್ರೊ.ಎಂ.ಡಿ ನಂಜುಂಡಸ್ವಾಮಿ ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 23 | 2019–20.ಸಾ.ವಿ.ವಿ.ಪ.02 ಸಾ & ಅ. ವಿಭಾಗ –08 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ಡಾ. ಬಾಬು ಜಗಜೀವನರಾಮ್ ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಡಾ. ಬಾಬು ಜಗಜೀವನರಾಮ್ ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| 24 | 2019–20.ಸಾ.ವಿ.ವಿ.ಪ.02<br>ಸಾ & ಅ. ವಿಭಾಗ –09 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ಸಂತ ಶಿಶುನಾಳ ಷರೀಫ ಅಧ್ಯಯನ ಪೀಠದ" ಪರಿನಿಯಮವನ್ನು ರಚಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಒಂದು ಬಾರಿಯ ಅನುದಾನದೊಂದಿಗೆ "ಸಂತ ಶಿಶುನಾಳ ಷರೀಫ ಅಧ್ಯಯನ ಪೀಠ"ವನ್ನು ಸ್ಥಾಪಿಸಿರುವ ಸಂಬಂಧವಾಗಿ ರಚಿಸಿರುವ ಕರಡು ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 25 | 2019–20.ಸಾ.ವಿ.ವಿ.ಪ.02<br>ಸಾ & ಅ. ವಿಭಾಗ –10 | 2018–19ನೇ ಸಾಲಿನ ವಾರ್ಷಿಕ ವರದಿಯ ಬಗ್ಗೆ. | 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರದ ಹೊಸ ಮಾರ್ಗಸೂಚಿಯನ್ವಯ ಸಿದ್ಧಪಡಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿದ ಸಭೆಯು ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | ಸಿಬ್ಬಂದಿ ವಿಭಾಗ | |
| 26 | 2019–20.ಸಾ.ವಿ.ವಿ.ಪ.02<br>ಸಿಬ್ಬಂದಿ ವಿಭಾಗ –01 | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿನ ಸ್ನಾತಕೋತ್ತರ ಭೌತಶಾಸ್ತ್ರ, ರಸಾಯನಶಾಸ್ತ್ರ, ಪರಿಸರ ವಿಜ್ಞಾನ ಹಾಗೂ ಸಮಾಜಶಾಸ್ತ್ರ ವಿಭಾಗಗಳಿಗೆ ಹುದ್ದೆಗಳ ಸೃಜನೆ ಕುರಿತು ರಚಿಸಲಾದ ಪರಿನಿಯಮಾವಳಿಗೆ ಸರ್ಕಾರವು ಕೋರಿರುವ ಮಾಹಿತಿ/ಸ್ಪಷ್ಟೀಕರಣವನ್ನು ಸಲ್ಲಿಸುವ ಕುರಿತು. | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿನ ಸ್ನಾತಕೋತ್ತರ ಭೌತಶಾಸ್ತ್ರ, ರಸಾಯನಶಾಸ್ತ್ರ, ಪರಿಸರ ವಿಜ್ಞಾನ ಹಾಗೂ ಸಮಾಜಶಾಸ್ತ್ರ ವಿಭಾಗಗಳಿಗೆ ಹುದ್ದೆಗಳ ಸೃಜನೆ ಕುರಿತು ರಚಿಸಲಾದ ಪರಿನಿಯಮಾವಳಿಗೆ ಸರ್ಕಾರವು ಕೋರಿರುವ ಮಾಹಿತಿ/ಸ್ಪಷ್ಟೀಕರಣವನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿರುವುದನ್ನು ಸಭೆಯು ಗಮನಿಸಿತು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಿರುವ ಮಾಹಿತಿ/ ಸ್ಪಷ್ಟೀಕರಣಕ್ಕೆ ಅನುಮೋದನೆ ನೀಡಿತು. |
| 27 | 2019–20.ಸಾ.ವಿ.ವಿ.ಪ.02<br>ಸಿಬ್ಬಂದಿ ವಿಭಾಗ –02 | ಸ್ನಾತಕೋತ್ತರ ಕಂಪ್ಯೂಟರ್ ಅಪ್ಲಿಕೇಶನ್ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸುವ ಕುರಿತು. | ಸ್ನಾತಕೋತ್ತರ ಕಂಪ್ಯೂಟರ್ ಅಪ್ಲಿಕೇಶನ್ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸಲು ರಚಿಸಲಾಗಿರುವ ಕರಡು ಪರಿನಿಯಮಾವಳಿಯನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿರುವುದನ್ನು ಗಮನಿಸಿತು. ಹಾಗೂ ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು. |

| | | | |
|---|---|---|---|
| 28 | 2019-20.ಸಾ.ವಿ.ವಿ.ಪ.02 ಸಿಬ್ಬಂದಿ ವಿಭಾಗ -03 | ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸುವ ಕುರಿತು. | ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸಲು ರಚಿಸಲಾಗಿರುವ ಕರಡು ಪರಿನಿಯಮಾವಳಿಯನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿರುವುದನ್ನು ಗಮನಿಸಿತು. ಹಾಗೂ ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು. |
| 29 | 2019-20.ಸಾ.ವಿ.ವಿ.ಪ.02 ಸಿಬ್ಬಂದಿ ವಿಭಾಗ -04 | ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸುವ ಕುರಿತು. | ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸಲು ರಚಿಸಲಾಗಿರುವ ಕರಡು ಪರಿನಿಯಮಾವಳಿಯನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿರುವುದನ್ನು ಗಮನಿಸಿತು. ಹಾಗೂ ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು. |
| 30 | 2019-20.ಸಾ.ವಿ.ವಿ.ಪ.02 ಸಿಬ್ಬಂದಿ ವಿಭಾಗ -05 | ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸುವ ಕುರಿತು. | ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಭಿಸಲು ರಚಿಸಲಾಗಿರುವ ಕರಡು ಪರಿನಿಯಮಾವಳಿಯನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿರುವುದನ್ನು ಗಮನಿಸಿತು. ಹಾಗೂ ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು. |
| 31 | 2019-20.ಸಾ.ವಿ.ವಿ.ಪ.02 ಸಿಬ್ಬಂದಿ ವಿಭಾಗ -06 | ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ವೇತನ ಶ್ರೇಣಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ತತ್ಸಮಾನ ವೃಂದದ ಇತರೆ ಶೈಕ್ಷಣಿಕ ಸಿಬ್ಬಂದಿಗಳಿಗೆ 7ನೇ ಪರಿಷ್ಕೃತ ಯು.ಜಿ.ಸಿ. ವೇತನ ಜಾರಿಗೊಳಿಸುವ ಸಂಬಂಧ ರಚಿಸಿರುವ ಕರಡು ಪರಿನಿಯಮಾವಳಿ ಅನುಮೋದನೆ ಕುರಿತು. | ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ವೇತನ ಶ್ರೇಣಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ತತ್ಸಮಾನ ವೃಂದದ ಇತರೆ ಶೈಕ್ಷಣಿಕ ಸಿಬ್ಬಂದಿಗಳಿಗೆ 7ನೇ ಪರಿಷ್ಕೃತ ಯು.ಜಿ.ಸಿ. ವೇತನ ಜಾರಿಗೊಳಿಸುವ ಸಂಬಂಧ ರಚಿಸಿರುವ ಕರಡು ಪರಿನಿಯಮಾವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುವ ಕ್ರಮಕ್ಕೆ ವಿದ್ಯಾವಿಷಯಕ ಪರಿಷತ್ ಸಭೆಯು ಘಟನೋತ್ತರ ಅನುಮೋದನೆ ನೀಡಿತು. |
| | | **ಪರೀಕ್ಷಾಂಗ ವಿಭಾಗ** | |
| 32 | 2019-20.ಸಾ.ವಿ.ವಿ.ಪ.02 ಪ. ವಿಭಾಗ -01 | ವಿವಿಧ ಸ್ನಾತಕ ಪದವಿಗಳಿಗೆ 2005-06 ರಿಂದ 2013-14 ರವರೆಗೆ ಪ್ರವೇಶ ಪಡೆದು Double the Duration of the Course ಪೂರೈಸಿರುವ ವಿದ್ಯಾರ್ಥಿಗಳಿಗೆ 2019-20ರ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡುವ ಕುರಿತು. | ವಿವಿಧ ಸ್ನಾತಕ ಪದವಿಗಳಿಗೆ 2005-06 ರಿಂದ 2013-14 ರವರೆಗೆ ಪ್ರವೇಶ ಪಡೆದು Double the Duration of the Course ಪೂರೈಸಿರುವ ವಿದ್ಯಾರ್ಥಿಗಳಿಗೆ 2019-20ರ ಶೈಕ್ಷಣಿಕ ಸಾಲಿನಲ್ಲಿ ಒಂದೇ |

| | | | |
|---|---|---|---|
| | | | ಪರೀಕ್ಷಾ ಕೇಂದ್ರ ಘೋಷಿಸಿ ಪರೀಕ್ಷೆ ನಡೆಸಲು ಹಾಗೂ ಒಂದೇ ಬಾರಿಗೆ I, III, V & II, IV, VI ನೇ ಸೆಮಿಸ್ಟರ್ ಪರೀಕ್ಷೆಗಳನ್ನು (one time measure) ನಡೆಸಲು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 33 | 2019-20.ಸಾ.ವಿ.ವಿ.ಪ.02 ಪ. ವಿಭಾಗ -02 | ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ (CBCS) ಚಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಕುರಿತು. | ಸ್ನಾತಕೋತ್ತರ ಪದವಿಯ CBCS ವಿನಿಯಮದಲ್ಲಿ ಚಾಲೆಂಜ್ ಮೌಲ್ಯಮಾಪನವನ್ನು ಅಳವಡಿಸಲು ಈಗಾಗಲೇ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಸರ್ಕಾರಕ್ಕೆ ಪರಿಷ್ಕೃತ ವಿನಿಯಮವನ್ನು ಸಲ್ಲಿಸಿರುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಅವಗಾಹನೆಗೆ ತಂದರು. ಈ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (CBCS) ಚಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 34 | 2019-20.ಸಾ.ವಿ.ವಿ.ಪ.02 ಪ. ವಿಭಾಗ -03 | ಸಿದ್ಧಯ್ಯ ಮಠದ ರವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು. | ಸಿದ್ಧಯ್ಯ ಮಠದ ರವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | **ಕ್ರೀಡಾ ವಿಭಾಗ** | |
| 35 | 2019-20.ಸಾ.ವಿ.ವಿ.ಪ.02 ಕ್ರೀಡಾ ವಿಭಾಗ-01 | 2019-20ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಲಹಾ ಸಮಿತಿಯ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು. | 2019-20ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಲಹಾ ಸಮಿತಿಯ ಸಭಾ ನಡಾವಳಿಗಳನ್ನು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 36 | 2019-20.ಸಾ.ವಿ.ವಿ.ಪ.02 ಕ್ರೀಡಾ ವಿಭಾಗ-02 | 2019-20ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಪುರುಷ ಮತ್ತು ಮಹಿಳೆಯರ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ಮತ್ತು 2019-20ನೇ ಸಾಲಿನ ಅಖಿಲ ಭಾರತ/ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾ ತಂಡಗಳನ್ನು ಆಯ್ಕೆ ಮಾಡಲು ಅನುಮತಿ ಹಾಗೂ ಅಗತ್ಯವಿರುವ ಖರ್ಚು ವೆಚ್ಚಗಳಿಗಾಗಿ ಮುಂಗಡ ಹಣ ಮಂಜೂರಾತಿ ಕುರಿತು. | 2019-20ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಪುರುಷ ಮತ್ತು ಮಹಿಳೆಯರ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ಮತ್ತು 2019-20ನೇ ಸಾಲಿನ ಅಖಿಲ ಭಾರತ/ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾ ತಂಡಗಳನ್ನು ಆಯ್ಕೆ ಮಾಡಲು ಅನುಮತಿ ಹಾಗೂ ಅಗತ್ಯವಿರುವ ಖರ್ಚು ವೆಚ್ಚಗಳಿಗಾಗಿ ರೂ. 12.00 ಲಕ್ಷಗಳನ್ನು ಮುಂಗಡವಾಗಿ ಮಂಜೂರಾತಿ ಮಾಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿ, ಕೈಗೊಂಡಿರುವ ಕ್ರಮವನ್ನು ಒಪ್ಪಬಹುದೆಂದು |

| | | | |
|---|---|---|---|
| | | | ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು |
| ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | | |
| 37 | 2019-20.ಸಾ.ವಿ.ವಿ.ಪ.02 ಸಾ & ಅ. ವಿಭಾಗ -11 | ತುಮಕೂರು ವಿಶ್ವವಿದ್ಯಾನಿಲಯ ಮತ್ತು ರೀಸರ್ಚ್ ಫಾರ್ ರೀಸರ್‌ಜೆನ್ಸಿ ಫೌಂಡೇಷನ್ ನಾಗಪುರ್ (Research for Resurgence Foundation, Nagpur) ಒಡಂಬಡಿಕೆ ಮಾಡಿಕೊಂಡಿರುವ ಕ್ರಮವನ್ನು ಸ್ಥಿರೀಕರಿಸುವ ಬಗ್ಗೆ. | ರೀಸರ್ಚ್ ಫಾರ್ ರೀಸರ್‌ಜೆನ್ಸಿ ಫೌಂಡೇಷನ್ ನಾಗಪುರ್ (Research for Resurgence Foundation, Nagpur) ಇವರು ಸಲ್ಲಿಸಿರುವ ಒಡಂಬಡಿಕೆಯ ಪ್ರಸ್ತಾವನೆಯನ್ನು ಅನುಮೋದಿಸಿತು ಮತ್ತು ಒಡಂಬಡಿಕೆ (MOU) ಮಾಡಿಕೊಂಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸ್ಥಿರೀಕರಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 38 | 2019-20.ಸಾ.ವಿ.ವಿ.ಪ.02 ಸಾ & ಅ. ವಿಭಾಗ -12 | BReT Solutions Bangalore (Banking Recruitment Total Solutions) ಇವರು ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2 ಕೋರ್ಸ್‌ಗಳನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧವಾಗಿ ಚರ್ಚೆಯ ಬಗ್ಗೆ. | BReT Solutions Bangalore (Banking Recruitment Total Solutions) ಇವರು ಸಲ್ಲಿಸಿರುವ ಒಡಂಬಡಿಕೆಯ ಪ್ರಸ್ತಾವನೆಯನ್ನು ಅನುಮೋದಿಸಿತು ಮತ್ತು ಒಡಂಬಡಿಕೆ (MOU) ಮಾಡಿಕೊಳ್ಳಲು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| ಶೈಕ್ಷಣಿಕ ವಿಭಾಗ | | | |
| 39 | 2019-20.ಸಾ.ವಿ.ವಿ.ಪ.02 ಶೈ.ವಿ-12 | 2019-20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾದ ಹೊಸ ಸ್ನಾತಕೋತ್ತರ ಕೋರ್ಸ್‌ನ ಪಠ್ಯಕ್ರಮದ ಪ್ರಕಟಣೆ ಕುರಿತು. | ಎಂ.ಬಿ.ಎ. ಬ್ಯುಸಿನೆಸ್ ಅನಾಲಿಟಿಕ್ಸ್ ಕೋರ್ಸಿನ ಪಠ್ಯಕ್ರಮವನ್ನು ಈಗಾಗಲೇ ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 40 | 2019-20.ಸಾ.ವಿ.ವಿ.ಪ.02 ಶೈ.ವಿ-13 | 2019-20ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕನ್ನಡ ಪದವಿಗೆ ಕನ್ನಡ ರತ್ನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಯ ಪ್ರವೇಶಾತಿ ಅನುಮೋದನೆ ಕುರಿತು. | 2019-20ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕನ್ನಡ ಪದವಿಗೆ ಕನ್ನಡ ರತ್ನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಗೆ ಪ್ರವೇಶಾತಿ ನೀಡಿರುವ ಕ್ರಮವನ್ನು ಸ್ನಾತಕೋತ್ತರ ಪ್ರವೇಶಾತಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಘಟನೋತ್ತರವಾಗಿ ಅನುಮೋದಿಸಿ, ಕೈಗೊಂಡಿರುವ ಕ್ರಮವನ್ನು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| ಪರೀಕ್ಷಾ ವಿಭಾಗ | | | |
| 41 | 2019-20.ಸಾ.ವಿ.ವಿ.ಪ.02 ಪ. ವಿಭಾಗ -04 | ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿಯ ನಡಾವಳಿಯ ಚರ್ಚೆ ಹಾಗೂ ನಿರ್ಣಯ ಕೋರಿ. | 2019ರ ಏಪ್ರಿಲ್/ಮೇ ಮಾಹೆಗಳಲ್ಲಿ ಜರುಗಿದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳ ವಿರುದ್ಧ ವಿಚಾರಣಾ ಸಮಿತಿಯು ಕೈಗೊಂಡಿರುವ ನಿರ್ಣಯವನ್ನು ಸಭೆಯು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 42 | 2019-20.ಸಾ.ವಿ.ವಿ.ಪ.02 ಪ. ವಿಭಾಗ -05 | 2019-20ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ | 2019-20ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ |

| | | | |
|---|---|---|---|
| | | ಮಂಡಳಿಗಳನ್ನು ರಚಿಸಿರುವ ಕುರಿತು. | ಸಂಬಂಧಿಸಿದಂತೆ ಪರೀಕ್ಷಾ ಮಂಡಳಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಅನುಸಾರ ವಿಷಯವಾರು B.O.A.E. ಗಳನ್ನು ರಚಿಸಿ, ಜೇಷ್ಠತೆಯನುಸಾರ B.O.E. ಅಧ್ಯಕ್ಷರು/ ಸದಸ್ಯರುಗಳನ್ನು B.O.A.E. ನೇಮಕಮಾಡಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯವನ್ನು ಚರ್ಚಿಸಿದ ಸಭೆಯು ಕೈಗೊಂಡಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | **ಕಾಲೇಜು ಅಭಿವೃದ್ಧಿ ಪರಿಷತ್** | |
| 43 | 2019-20.ಸಾ.ವಿ.ವಿ.ಪ.02 ಕಾ.ಅ.ಪ -02 | 2019-20ನೇ ಸಾಲಿನ ಶೈಕ್ಷಣಿಕ ಸಾಲಿಗೆ ಹೊಸ ಸಂಯೋಜನೆ ಮಂಜೂರಾಗದಿದ್ದರೂ ಪ್ರವೇಶ ಮಾಡಿಕೊಂಡು ವಿದ್ಯಾರ್ಥಿಗಳ ಪ್ರವೇಶವನ್ನು ಅನುಮೋದಿಸುವಂತೆ ಕೋರಿರುವ ಕುರಿತು. | 2019-20ನೇ ಸಾಲಿನ ಶೈಕ್ಷಣಿಕ ಸಾಲಿಗೆ ಹೊಸ ಸಂಯೋಜನೆ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯದಿಂದ ಮಂಜೂರಾಗದೇ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳಬಾರದು ಎಂದು ತಿಳಿಸಿದ್ದರೂ ಸಹ, ಪ್ರವೇಶ ಸಮಯದಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡು ಪ್ರವೇಶವನ್ನು ಅನುಮೋದಿಸುವಂತೆ ಕೋರಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿರುತ್ತದೆ. ಈ ರೀತಿ ಕ್ರಮ ಕೈಗೊಂಡಿರುವುದಕ್ಕೆ ರೂ. ಒಂದು ಲಕ್ಷ ದಂಡ ವಿಧಿಸಲು ಹಾಗೂ ಎಚ್ಚರಿಕೆಯನ್ನು ನೀಡಲು ಸಭೆಯು ತೀರ್ಮಾನಿಸಿತು. ಮುಂದುವರೆದು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳ ಪ್ರವೇಶವನ್ನು ಅನುಮೋದಿಸಲು ಸಭೆಯು ಒಪ್ಪಿತು. ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | **ಹೆಚ್ಚುವರಿ ಕಾರ್ಯಸೂಚಿಗಳು** | |
| | | **ಕಾಲೇಜು ಅಭಿವೃದ್ಧಿ ಪರಿಷತ್** | |
| 44 | 2019-20.ಸಾ.ವಿ.ವಿ.ಪ.02/ ಕಾ.ಅ.ಪ.-03 | ಸಂಯೋಜನೆಗೆ ಸಂಬಂಧಿಸಿದಂತೆ ವಿನಿಯಮವನ್ನು ರಚಿಸಿರುವ ಕುರಿತು. | ಸಂಯೋಜನೆಗೆ ವಿನಿಯಮಕ್ಕೆ ಸಂಬಂಧಿಸಿದಂತೆ, ಮಾನ್ಯ ಶಿಕ್ಷಣ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜೊತೆಗೆ ನಡೆದ ಸಭೆಯಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಸಂಯೋಜನೆಗೆ ಸಂಬಂಧಿಸಿದಂತೆ, ಪರಿನಿಯಮಗಳು ರಚನೆಯಾಗದಿರುವುದಾಗಿ ತಿಳಿಸಿ, ತುಮಕೂರು ವಿಶ್ವವಿದ್ಯಾನಿಲಯವು ಈ ಕುರಿತು ತನ್ನದೇ ಆದ ಸಂಯೋಜನೆ ನಿಯಮವನ್ನು ರಚಿಸಿಕೊಳ್ಳುವಂತೆ ಸೂಚಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |

| | | | |
|---|---|---|---|
| | | | ಈ ಕುರಿತಾಗಿ ಯು.ಜಿ.ಸಿ. ಸಂಯೋಜನೆ ನಿಯಮ, ಕ.ರಾ.ವಿ.ವಿ. ಕಾಯ್ದೆ/ ಬೆಂಗಳೂರು/ಮೈಸೂರು ವಿಶ್ವವಿದ್ಯಾನಿಲಯಗಳ ಸಂಯೋಜನೆಯ ನಿಯಮಗಳನ್ನು ಪರಿಶೀಲಿಸಿ, ಕರಡು ವಿನಿಯಮವನ್ನು ರಚಿಸಿರುವುದಾಗಿ ಹಾಗೂ ವಿವಿಧ ಸಂಯೋಜನೆಗೆ ಸಂಬಂಧಿಸಿದ ಮುಖ್ಯ ಷರತ್ತು ಮತ್ತು ನಿಬಂದನೆಗಳನ್ನು, ಮತ್ತು ಸ್ನಾತಕೋತ್ತರ ಪದವಿ ಪ್ರಾರಂಭಿಸಲು ಇರುವ ನಿಯಮವನ್ನು ಸ್ಥಳೀಯ ವಿಚಾರಣಾ ಸಮಿತಿಯ ರಚನೆ ಮತ್ತು ಅದರ ಕಾರ್ಯರೂಪ ಈ ಕುರಿತಾಗಿ ಸಿದ್ಧಪಡಿಸಲಾಗಿದ್ದ ಸಂಯೋಜನೆಯ ಕರಡು ವಿನಿಯಮದ ಸಾರಾಂಶವನ್ನು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ ರವರು ಸಭೆಯ ಮುಂದೆ ಮಂಡಿಸಿದರು.<br>ಈ ಕುರಿತಾಗಿ ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ವಿನಿಯಮದಲ್ಲಿ ಸ್ಥಳೀಯ ವಿಚಾರಣಾ ಸಮಿತಿಗೆ ನೀಡುವ ಮಾರ್ಗಸೂಚಿಯಲ್ಲಿ ಯಾವ ಮಾನದಂಡಗಳು ಕಡ್ಡಾಯ ಹಾಗೂ ಅಪೇಕ್ಷಣೀಯ (Desirable) ಆಗಿರಬೇಕೆಂಬುದನ್ನು ಸ್ಪಷ್ಟವಾಗಿ ನಮೂದಿಸುವಂತೆ ಹಾಗೂ ವಿನಿಯಮದಲ್ಲಿ ಅವಶ್ಯಕ ಎಂದು ಕಂಡುಬರುವುದನ್ನು ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರವನ್ನು ನೀಡಲಾಯಿತು ಹಾಗೂ ಸದರಿ ವಿಷಯವನ್ನು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಸಂಶೋಧನಾ ವಿಭಾಗ** | | | |
| 45 | 2019–20.ಸಾ.ವಿ.ವಿ.ಪ.02<br>ಪಿಹೆಚ್.ಡಿ ವಿಭಾಗ –04 | ಡಾ. ಟಿ. ಹನುಮಂತರಾಯಪ್ಪ, ರವರ ಮಾರ್ಗದರ್ಶನದಡಿಯಲ್ಲಿರುವ ಸಂಶೋಧನಾರ್ಥಿ–ಗಳನ್ನು ಮರು ಹಂಚಿಕೆ ಮಾಡುವ ಕುರಿತು. | ಡಾ. ಟಿ. ಹನುಮಂತರಾಯಪ್ಪ, ರವರ ಮಾರ್ಗದರ್ಶನದಡಿಯಲ್ಲಿರುವ ಸಂಶೋಧನಾರ್ಥಿಗಳನ್ನು ಮರು ಹಂಚಿಕೆ ಮಾಡಿರುವ ಕ್ರಮವನ್ನು ಸಭೆಯು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.